ದೃಢೀಕರಣ ಪತ್ರವನ್ನು ಎಷ್ಟು ಜನರಿಗೆ ನೀಡಲಾಗಿದೆ? ಇನ್ನು ಎಷ್ಟು ಜನರಿಗೆ ದೃಡೀಕರಣ ಪತ್ರ, ನೀಡಬೇಕಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) ವಿಶ್ವದಾದ್ಯಂತ ದಿನಾಂಕ : 3-12-99 ರಂದು, ವಿಶ್ವ ಅಂಗವಿಕಲರ ದಿನಾಚಾರಣೆ ಆಗಿದ್ದರೂ ಇನ್ನು ನಿಜವಾದ ಫಲಾನುಭವಿಗಳನ್ನು ಗುರುತಿಸದಿರಲು ಕಾರಣವೇನು? ಯಾವಾಗ ಗುರುತಿಸಲಾಗುವುದು. ರಾಜ್ಯದಲ್ಲಿ ಎಷ್ಟು ಜನ ಅಂಗವಿಕಲರಿದ್ದಾರೆ? ವಿವರ ಒದಗಿಸುವುದು.

ಶ್ರೀಮತಿ. ಮೋಟಮ್ಮ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯರು) :

ಅ) ಕೊಡಗು ಜಿಲ್ಲೆಯ ಮೂರು ತಾಲ್ಲೂಕುಗಳಿಂದ ಇದುವರೆಗೆ 910 ಅರ್ಹ ಅಂಗವಿಕಲರನ್ನು ಗುರುತಿಸಲಾಗಿದ್ದು, ಮಡಿಕೇರಿ ತಾಲ್ಲೂಕಿನಿಂದ 476, ಸೋಮವಾರ ಪೇಟೆ ತಾಲ್ಲೂಕ್‌ನಿಂದ 305 ವೀರರಾಜಪೇಟೆ ತಾಲ್ಲೂಕಿನಿಂದ 129 ಫಲಾನುಭವಿಗಳಿರುತ್ತಾರೆ. ಇವರುಗಳ ಪೈಕಿ ಮಡಿಕೇರಿ ತಾಲ್ಲೂಕಿನಿಂದ 314 ಸೋಮವಾರ ಪೇಟೆ ತಾಲ್ಲೂಕಿನಿಂದ 296, ವೀರರಾಜ ಪೇಟೆ ತಾಲ್ಲೂಕಿನಿಂದ 125 ಅಂಗವಿಕಲರುಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ಉಳಿದ ಅಂಗವಿಕಲರಿಗೆ ಗುರುತಿನ ಚೀಟಿ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಅರ್ಹ ಫಲಾನುಭವಿಗಳು ಗುರುತಿನ ಚೀಟಿ ಪಡೆಯಲು ಅರ್ಜಿ ಜೊತೆಗೆ ಕೆಲವು ಅಗತ್ಯ ದಾಖಲೆಗಳನ್ನು ಒದಗಿಸಲು ವಿಳಂಬ ಮಾಡಿರುವುದರಿಂದ ಆಗಾಗ್ಗೆ ನಡೆಸುವ ಶಿಬಿರಗಳಲ್ಲಿ ಇವುಗಳನ್ನು ಮಾನ್ಯ ಮಾಡಲು ತೊಂದರೆ ಉಂಟಾಗಿ ಅವುಗಳನ್ನು ಪ್ರತ್ಯೇಕವಾಗಿ ಪಡೆದು ಜಿಲ್ಲಾಧಿಕಾರಿಗಳ ಸಹಿಗೆ ಸಲ್ಲಿಸುವಲ್ಲಿ ವಿಳಂಬವಾಗಿದೆ. ಆದರೂ ಎಲ್ಲಾ ಫಲನುಭವಿಗಳ ಅರ್ಜಿಯನ್ನು ಒಂದೇ ಸಲಕ್ಕೆ ಕ್ರೊಢೀಕರಿಸಿ ಜಿಲ್ಲಾಧಿಕಾರಿಗಳ ಸಹಿಗೆ ಸಲ್ಲಿಸಿ, ವಿತರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. 1999ರ ಗಣತಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 3,55,819 ಅಂಗವಿಕಲರಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ವೃದ್ಧಾಪ್ಯ ವೇತನ

442 - ಶ್ರೀ. ಅಪ್ಪಚ್ಚು ರಂಜನ್. ಎಂ.ಪಿ. (ಸೋಮವಾರಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಜನರಿಗೆ ವೃದ್ಧಾಪ್ಯ ವೇತನ ಮಂಜೂರು ಮಾಡಲಾಗಿದೆ; ಮಂಜೂರು ಮಾಡುವಾಗ ಯಾವ ಮಾನದಂಡದ ಆಧಾರದ ಮೇಲೆ ಮಂಜೂರು ಮಾಡಲಾಗುತ್ತದೆ? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ಈ ಕೆಳಗಿನಂತೆ ವೃದ್ಧಾಪ್ಯ ವೇತನ ಮಂಜೂರು ಮಾಡಲಾಗಿದೆ.

ಮಡಿಕೇರಿ	:	2339
ವಿರಾಜಪೇಟೆ	:	8682
ಸೋಮವಾರಪೇಟೆ	:	4889

ಮಂಜೂರು ಮಾಡುವಾಗ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗಿದೆ.

1) ಅರ್ಜಿದಾರರು 65 ವರ್ಷ ಅಥವಾ ಅದಕ್ಕೂ ಹೆಚ್ಚು ವಯಸ್ಸಿನ ನಿರಾಶ್ರಿತರಾಗಿರಬೇಕು.

2) ಅದೇ ಜಿಲ್ಲೆಯಲ್ಲಿ ಮೂರು ವರ್ಷಕ್ಕೂ ಹೆಚ್ಚು ಕಾಲ ವಾಸವಾಗಿರಬೇಕು.

3) ವಾರ್ಷಿಕ ಆದಾಯ ಮಿತಿ 11,500 ರೂ.ಗಳಿಗಿಂತ ಕಡಿಮೆ ಇರಬೇಕು.

4) 20 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳಿರಬಾರದು.

ಕ.ಶಾ.ರ.ಸಾ. ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು

443- ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇಲಾಖೆಯಲ್ಲಿ ಯಾವ ದರ್ಜೆಯ ಅಧಿಕಾರಿಗಳು ಮತ್ತು ನೌಕರರು ಎಷ್ಟು ಜನ ಕಾರ್ಯ ನಿರ್ವಹಿಸುತ್ತಿದ್ದಾರೆ? ಖಾಲಿ ಹುದ್ದೆ ಭರ್ತಿ ಮಾಡಲು ಏನು ಕ್ರಮ ಕೈಗೊಳ್ಳಲಾಗುವುದು, ವಿವರ ಒದಗಿಸುವುದು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿರುವ ಅಧಿಕಾರಿಗಳ ಹುದ್ದೆಗಳು ಮತ್ತು ರಿಕ್ತ ಸ್ಥಾನಗಳು ಈ ಕೆಳಕಂಡಂತಿದೆ:

ಶ್ರೇಣಿ	ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ	ರಿಕ್ತ ಸ್ಥಾನಗಳು
ಹಿರಿಯ ಶ್ರೇಣಿ-1 ಮತ್ತು ಮೇಲ್ದರ್ಜೆ	90	18
ಕಿರಿಯ ಶ್ರೇಣಿ-1	166	73
ಶ್ರೇಣಿ-2	388	69
ಒಟ್ಟು	**644**	**160**